ಅಧ್ಯಕ್ಷರು.—ಮಾನ್ಯ ಸದಸ್ಯರು ಎದ್ದುನಿಂತುಕೊಂಡು ವಿಷಾದ ವ್ಯಕ್ತಪಡಿಸುತ್ತೇನೆಂದು ಹೇಳಿದ್ದಾರೆ. ಮತ್ತು ವಿರೋಧ ಪಕ್ಷದ ನಾಯಕರೂ ಸಹ ಅವರ ಪರವಾಗಿ ಹೇಳಿದ್ದಾರೆ. ಈಗ ಪಂಪಾಪತಿಯವರೂ ಕೂಡ ಎದ್ದುನಿಂತುಕೊಂಡು ಮಾನ್ಯ ಸದಸ್ಯರು ಕ್ಷಮಾಪಣೆ ಹೇಳಿದ್ದಾರೆ ಎಂದು ಹೇಳಿದ್ದಾರೆ. ಆದಂದರಿಂದ ಮುಂದೆ ಈ ಅಜೆಂಡಾದಲ್ಲಿರತಕ್ಕಂಥಾ ಕಾಲಿಂಗ್ ಅಟೆನ್‌ಷನ್‌ನ್ನು ತೆಗೆದುಕೊಳ್ಳೋಣ.

ಶ್ರೀ ಎಂ. ರಘುಂಪತಿ.—ಮಾನ್ಯ ಅಧ್ಯಕ್ಷರೇ, ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಈ ಸಭೆಯಲ್ಲಿ ಈಗ ಕಾವೇರಿದ ವಾತಾವರಣ ಸೃಷ್ಟಿಯಾಗುವುದು, ಉದ್ವಪವಾಗುವುದನ್ನು ನಾವು ನೋಡಿಕೊಂಡು ಬಂದಿದ್ದೇವೆ. ಆದರೆ ಈಪೊತ್ತು ಏನು ನಡೆಯಿತು

(ಗೊಂದಲ)

(೧೦-೧೫ಜನ ಸದಸ್ಯರು ಎದ್ದುನಿಂತುಕೊಂಡು ಮಾತನಾಡಲು ಶುರು ಮಾಡಿದರು)

ಅಧ್ಯಕ್ಷರು.—ಎಲ್ಲರೂ ಕೂಳಿತುಕೊಳ್ಳಿ. ಶ್ರೀಮಾನ್ ಪಂಪಾಪತಿಯವರು ಎದ್ದುನಿಂತುಕೊಂಡು ಮಾನ್ಯ ಸದಸ್ಯರು ಕ್ಷಮಾಪಣೆ ಹೇಳಿದರು ಎನ್ನುವುದರ ಬಗ್ಗೆ ಹೇಳಿದ್ದಾರೆ. ಅವರು ಹೇಳಿರುವುದಕ್ಕೆ ಅವರೇ ಡೈರೆಕ್ಟ್ ಎವಿಡೆನ್ಸ್ ಆದ ಹಾಗಾಯಿತು. ಆದುದರಿಂದ ಇದನ್ನು ಇಲ್ಲಿಗೇ ಮುಂಗಿಸೋಣ.

(ಗೊಂದಲ)

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಈಗ ತಾವು ಇದರ ಬಗ್ಗೆ ಒಂದು ನಿರ್ಣಯ ಕೊಟ್ಟಿದ್ದೀರಿ, ಅವರು ವಿಷಾದ ವ್ಯಕ್ತಪಡಿಸಿದ್ದಾರೆಂದು ಹೇಳಿದ್ದೀರಿ. ಅದನ್ನು ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ, ಹೋಗಲೂಬಾರದು. ಆದರ ಬಗ್ಗೆ ನಾನು ವಾಖ್ಯಾನವನ್ನು ಮಾಡುವುದಕ್ಕೆ ಹೋಗುವುದಿಲ್ಲ. ತಾವು ಆ ಸ್ಥಾನದಲ್ಲಿ ಇದ್ದುಕೊಂಡು ಅವರು ವಿಷಾದ ವ್ಯಕ್ತಪಡಿಸಿದ್ದಾರೆಂದು ತೀರ್ಪನ್ನು ಕೊಟ್ಟಮೇಲೆ ಅದನ್ನೇ ಅಂತಿಮ ಎಂದು ತಿಳಿದುಕೊಳ್ಳಬೇಕು. ಇನ್ನುಮುಂದೆ ಈ ರೀತಿ ನಡೆಯದೇ ಇರುವ ರೀತಿಯಲ್ಲಿ ನೋಡಿಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ —ನನಗೆ ಕೇಳಲಿಲ್ಲ.

ಅಧ್ಯಕ್ಷರು.—ಅವರು ಕೇಳಲಿಲ್ಲ ಎಂದು ಹೇಳುತ್ತಾರೆ.

ಶ್ರೀ ಯು. ಭೂಪತಿ.—ಅವರು ನಿಮ್ಮ ರೂಲಿಂಗ್ ಮೇಲೆ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಬಹುದೇ ?

ಶ್ರೀ ಎಂ. ರಘುಪತಿ.—ತಾವು ರೂಲಿಂಗ್ ಕೊಟ್ಟಮೇಲೆ ಆಯಿತು. ಮುಂದೆ ಕಾಲಿಂಗ್ ಅಟೆನ್‌ಷನ್ ತೆಗೆದುಂಕೊಳ್ಳಬಹುದು.

ಗವಂನ ಸೆಳೆಯುವ ಸೂಚನೆ

(i) ಬೀದರ್ ಜಿಲ್ಲೆಯಲ್ಲಿ ಪಠ್ಯ ಪುಸ್ತಕಗಳ ಅಭಾವದಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು.

ಶ್ರೀ ಮಲ್ಲಾರಿಗೌಡ ಪಾಟೀಲ್.—ಬೀದರ್ ಜಿಲ್ಲೆಯಲ್ಲಿ ಪಠ್ಯಪುಸ್ತಕಗಳ ಅಭಾವದಿಂದ ಪರೀಕ್ಷೆಗೆ ಕೂಳಿತುಕೊಳ್ಳುವ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವ ವಿಚಾರದ ಬಗ್ಗೆ ಮಾನ್ಯ ಶಿಕ್ಷಣ ಮಂತ್ರಿಗಳ ಗವನವನ್ನು ಸೆಳೆಯಬಯಸುತ್ತೇನೆ.

SRI MOHAMED LAIQUDDIN.—MR. Speaker, I have been given a copy of the Kannada version of the Statement of the Hon'ble Minister. I request you Sir, to kindly provide me an English copy of the Statement.

ಅಧ್ಯಕ್ಷರು.—ಇಂಗ್ಲೀಷ್ ಕಾಪಿಯನ್ನು ಮಾಡಿಸಿಕೊಡುತ್ತೇನೆ.

ಶ್ರೀ ಎಂ. ರಘುಪತಿ (ವಿದ್ಯಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ವಿವಿಧ ಪುಸ್ತಕಗಳು ಸರಬರಾಜು ಮಾಡಬೇಕಾಗಿರುವ ಸಂಖ್ಯೆ ಳಳಿ ಶೀರ್ಷಿಕೆಗಳು. ಇವುಗಳಲ್ಲಿ ೧೯೭೫-೮೬ರಲ್ಲಿ

ಮುದ್ರಣ ಆದವುಗಳ ಸಂಖ್ಯೆ ೨೫೨. ಉಳಿದ ೧೯೫ ಪುಸ್ತಕಗಳನ್ನು ಮುದ್ರಿಸುವ ಅವಶ್ಯಕತೆ ಇರಲಿಲ್ಲ. ಹಿಂದಿನ ವರ್ಷ ಮುದ್ರಿತವಾದ ಪ್ರತಿಗಳು ಸಾಕಷ್ಟಿದ್ದವು, ಅಗತ್ಯಕ್ಕೆ ಅನುಸಾರವಾಗಿ ಒಂದು ಮಳಿಗೆಯಿಂದ ಇನ್ನೊಂದಕ್ಕೆ ಕಳುಹಿಸಿಕೊಡುವ ವಿಪರ್ಾಡು ಮಾಡಲಾಗಿತ್ತು. ಬೇಡಿಕೆಗೆ ಅನುಸಾರವಾಗಿ ಅವಶ್ಯಕತೆಗಳನ್ನು ಪೂರೈಸಲಾಗಿತ್ತಿತ್ತು,

ಆವುಗಳಲ್ಲಿ ಉರ್ದು ಪಠ್ಯಪುಸ್ತಕಗಳ ಒಟ್ಟು ಶೀರ್ಷಿಕೆಗಳು ೬೭, ಇವುಗಳಲ್ಲಿ ಮುದ್ರಿತವಾದ ಪಠ್ಯಪುಸ್ತಕಗಳು ೨೭. ಉಳಿದ ೪೦ ಶೀರ್ಷಿಕೆಗಳ ಮುದ್ರಿತವಾಗ ಪ್ರತಿಗಳು ಸಾಕಷ್ಟು ಇದ್ದವು. ಅಗತ್ಯಕ್ಕೆ ಅನುಸಾರವಾಗಿ ಒಂದು ಮಳಿಗೆಯಿಂದ ಇನ್ನೊಂದು ಮಳಿಗೆಗೆ ವರ್ಗಾವಣೆ ಮಾಡಲಾಯಿತು.

ಇತ್ತೀಚೆಗೆ ದೂರುಗಳು ಬಂದಾಗ ಇಲಾಖೆಯು ಮತ್ತು ಮುದ್ರಣಾಲಯದ ಅಧಿಕಾರಿಗಳನ್ನು ಪ್ರತಿ ಜಿಲ್ಲಾ ಡಿಪೋಗಳಿಗೆ (ಮಳಿಗೆಗಳಿಗೆ) ಕಳುಹಿಸಿ ಅವಶ್ಯಕವಿರುವ ಉರ್ದು ಪುಸ್ತಕಗಳ ಮತ್ತು ಅಲ್ಲಿ ಹೆಚ್ಚಿರುವ ಉರ್ದು ಪುಸ್ತಕಗಳ ಮಾಹಿತಿ ಸಂಗ್ರಹಿಸಲಾಯಿತು. ಹೆಚ್ಚು ಇರುವಲ್ಲಿಂದ ಅವಶ್ಯಕ ವಿರುವಲ್ಲಿಗೆ ಕಳುಹಿಸುವ ವಿಪರ್ಾಡನ್ನು ತಕ್ಷಣ ಮಾಡಲಾಯಿತು,

ಈ ಮಾಹಿತಿ ಪ್ರಕಾರ ವರ್ಗಾವಣೆಯಾದ ೪೦ ಶೀರ್ಷಿಕೆಗಳಲ್ಲಿ ೪ ಶೀರ್ಷಿಕೆಗಳಲ್ಲಿ ಮಾತ್ರ ಕೊರತೆ ಕಂಡು ಬಂದಿದ್ದರಿಂದ ಬೇಡಿಕೆ ಪೂರೈಸಲು ಕೂಡಲೇ ಅವಶ್ಯಕವಿರುವಷ್ಟು ಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲಾಗಿದೆ, ಕೊರತೆ ಕಂಡುಬಂದ ನಾಲ್ಕು ಶೀರ್ಷಿಕೆಗಳ ವಿವರಣೆ ಈ ಕೆಳಕಂಡಂತಿದೆ.—

೧.	ಉರ್ದು ವಿಜ್ಞಾನ	೩ನೇ ತರಗತಿ	...	೧೪,೦೦೦
೨.	,,	೪ನೇ ತರಗತಿ	...	೧೦,೦೦೦
೩.	ಉರ್ದು ಗಣಿತ	೩ನೇ ತರಗತಿ	...	೧೯,೦೦೦
೪.	,,	೪ನೇ ತರಗತಿ	...	೧೦,೦೦೦

ಉರ್ದು ಪುಸ್ತಕಗಳ ಸರಬರಾಜಿಗೆ ವಿಳಂಬವಾಗಲು ಕಾರಣಗಳು.—

ಉರ್ದು ಲಿಪಿ ಬರೆಯುವವರ ಅಭಾವ, ಉರ್ದು ಲಿಪಿ ಬರೆಯುವವರ ಸಂಭಾವನೆ ಆಕರ್ಷಕವಾಗಿಲ್ಲದಿರುವುದು. ರಾಜ್ಯದಲ್ಲಿ ಕೇವಲ ಐದಾರು ಉರ್ದು ಮುದ್ರಣಾಲಯಗಳು ಮಾತ್ರ ಮುದ್ರಣ ಕಾರ್ಯ ನಿರ್ವಹಿಸುತ್ತಿರುವುದು ಹಾಗೂ ಆಫ್‌ಸೆಟ್ ಮುದ್ರಣ ಮೂಲಕ ಅಚ್ಚು ಮಾಡಲು ಉರ್ದು ಪಠ್ಯ ಪುಸ್ತಕಗಳನ್ನು ಆಫ್‌ಸೆಟ್ ಮುದ್ರಣಾಲಯಗಳಿಗೆ ಹಂಚಿ ಮುದ್ರಣ ಮಾಡಲಾಗಿದೆ.

ಬೀದರ್ ಜಿಲ್ಲೆಯಲ್ಲಿ ೩೪ ಶೀರ್ಷಿಕೆಗಳು ಸರಬರಾಜು ಆಗಿಲ್ಲವೆಂದು ದೂರು ಕೊಡಲಾಗಿತ್ತು. ಇದರ ಬಗ್ಗೆ ಅಧಿಕಾರಿಗಳನ್ನು ಕಳುಹಿಸಿ ಪರಿಶೀಲಿಸಿದಾಗ, ಇವುಗಳಲ್ಲಿ ೫ ಶೀರ್ಷಿಕೆಗಳ ದೂರು ಸರಿಯಿಲ್ಲ ಮತ್ತು ಉಳಿದ ೨೯ರಲ್ಲಿ ೬ ಉರ್ದು ಶೀರ್ಷಿಕೆಗಳು. ಅವುಗಳ ಕೊರತೆಯ ವಿವರಗಳು ಈ ಕೆಳಕಂಡಂತಿವೆ.—

			ಸರಬರಾಜು ಮಾಡಿದ ವಿವರ	
೧	ಉರ್ದು ರೀಡರ್	೪ನೇ ತರಗತಿ	೫೮೦ ಪ್ರತಿಗಳು	ಮೈಸೂರಿನಿಂದ
೨	,,	೬ನೇ ತರಗತಿ	೫೦೦ ,,	ಧಾರವಾಡದಿಂದ
೩	ಉರ್ದು ಡೀಟೈಲ್ಡ್ ಪುಸ್ತಕ	೧೦ನೇ ತರಗತಿ	೬೦೦ ,,	,,
೪	ಉರ್ದು ವಿಜ್ಞಾನ	೩ನೇ ತರಗತಿ	೧೦೦೦ ,,	ಮಂಗಳೂರಿನಿಂದ
೫	ಉರ್ದು ಗಣಿತ	೩ನೇ ತರಗತಿ	೨೯೮ ,,	ಚಿಕ್ಕಮಂಗಳೂರಿಂದ
೬	,,	೪ನೇ ,,	೫೦೨ ,,	ಧಾರವಾಡದಿಂದ

ಮೇಲ್ಕಂಡ ಕೊರತೆಯನ್ನು ಕೂಡಲೇ ಸರಿಪಡಿಸಲಾಯಿತು.

ಉಚಿತ ಪಠ್ಯಪುಸ್ತಕಗಳ ಹಂಚಿಕೆಯ ನಿರ್ಧಾರವನ್ನು ಸರ್ಕಾರ ೧೯೮೫ನೇ ಜೂನ್ ತಿಂಗಳಲ್ಲಿ ಕೈಗೊಂಡಿದ್ದರಿಂದ ಬೇಡಿಕೆಯಲ್ಲಿ ಹೆಚ್ಚಳ ಕಂಡು ಬಂದಿತು. ಆದುದರಿಂದ ಬೇಡಿಕೆಗಳನ್ನು ಪೂರೈಸಲು ಸ್ವಲ್ಪ ವಿಳಂಬವಾಯಿತು.

ಪುಸ್ತಕಗಳಿಲ್ಲದೆ ಹಿಂದೆ ಬಹಳ ಮಕ್ಕಳು ಓದುತ್ತಿದ್ದಾಗ, ಅಧ್ಯಾಪಕರು ತಮ್ಮ ಚಾಕಚಾಕ್ಯತೆಯಿಂದ ಮಕ್ಕಳಿಗೆ ಪಾಠ ಹೇಳುತ್ತಿದ್ದರು. ಉರ್ದು ಅಧ್ಯಾಪಕರೂ ಕೂಡ ಕೆಲವೊಂದು ಕಡೆ ಪುಸ್ತಕಗಳು ಕಡಿಮೆ ಬಿದ್ದಾಗ ಮಕ್ಕಳಿಗೆ ಅನ್ಯಾಯವಾಗದ ರೀತಿಯಲ್ಲಿ ಪಾಠ ಪ್ರವಚನ ನಡೆಸಿದ್ದಾರೆ. ಪರೀಕ್ಷೆಯನ್ನು ಮುಂದೆ ವಿಂಗಡಿಗೆ ತೊಂದರೆಯಾಗದಂತೆ ನಡೆಸುತ್ತಾರೆ.

ಇಂತಹ ತೊಂದರೆಗಳು ಮುಂದೆ ಬರದಂತೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಮಾನ್ಯ ಅಧ್ಯಕ್ಷರೇ ಈ ಬಗ್ಗೆ ನಾನು ಒಂದೇ ಒಂದು ಮಾತನ್ನು ಹೇಳಬಯಸುತ್ತೇನೆ. ಎಲ್ಲೆಲ್ಲಿ ಪುಸ್ತಕಗಳ ಕೊರತೆ ಇದೆಯೋ ಅದರ ಬಗ್ಗೆ ತಿಳಿಸಬೇಕು ಎಂದು ನಾನು ಎಲ್ಲಾ ಶಾಸಕರಿಗೂ ಕೂಡ ಪತ್ರ ಬರೆದಿದ್ದೇನೆ. ಎರಡು ತಿಂಗಳ ಹಿಂದೆ ಆ ಕಡೆಯ ಶಾಸಕರಿಗೂ, ಈ ಕಡೆಯ ಶಾಸಕರಿಗೂ ಪತ್ರ ಬರೆದಿದ್ದೇನೆ. ಏನೆಂದರೆ ನಿಮ್ಮ ಕ್ಷೇತ್ರದಲ್ಲಿ ಎಲ್ಲಾದರೂ ಕೂಡ ಪಠ್ಯಪುಸ್ತಕಗಳ ಕೊರತೆ ಇದ್ದರೆ ನಮ್ಮ ಗಮನಕ್ಕೆ ತನ್ನಿ ಎಂದು. ಅಧಿಕಾರಿಗಳ ಮುಖೇನ ನನ್ನ ಗಮನಕ್ಕೆ ಬಂದ ಮಾಹಿತಿ ಪ್ರಕಾರ ಕೆಲವು ಕಡೆ ಪಠ್ಯಪುಸ್ತಕಗಳ ಕೊರತೆ ಇರುವುದು ನನ್ನ ಗಮನಕ್ಕೆ ಬಂದಿಲ್ಲ, ಕೆಲವು ಕಡೆ ಪಠ್ಯಪುಸ್ತಕಗಳ ಕೊರತೆ ಇದೆ. ಈ ವಿಚಾರದಲ್ಲಿ ಪ್ರತಿಯೊಬ್ಬ ಶಾಸಕರಿಗೂ ಸಹ ಪತ್ರ ಬರೆದಿದ್ದೇನೆ. ನಿಮ್ಮ ಕ್ಷೇತ್ರದಲ್ಲಿ ಯಾವ ಯಾವ ಶಾಲೆಗಳಲ್ಲಿ ಪಠ್ಯಪುಸ್ತಕಗಳ ಕೊರತೆ ಇದೆ ಎನ್ನುವುದು ಕಂಡು ಬಂದರೆ ನನ್ನ ಗಮನಕ್ಕೆ ತನ್ನಿ, ತಕ್ಷಣವೇ ಅದನ್ನು ಪೂರೈಸುವುದಕ್ಕೆ ವಿಶೇಷ ಮುತುವರ್ಜಿ ವಹಿಸುತ್ತೇನೆಂದು ಪತ್ರ ಬರೆದಿದ್ದೇನೆ. ಬೀದರ್ ಜಿಲ್ಲೆಯಲ್ಲಿ ಪಠ್ಯಪುಸ್ತಕಗಳ ಕೊರತೆ ಇದೆ ನನ್ನ ಗಮನಕ್ಕೆ ಬಂದ ತಕ್ಷಣವೇ ೩ ದಿವಸದೊಳಗೆ ಆ ಕೊರತೆಯನ್ನು ಪೂರೈಸಿದ್ದೇನೆ. ಯಾರು ಯಾರು ಎಲ್ಲೆಲ್ಲಿ ಪಠ್ಯಪುಸ್ತಕಗಳು ತೊಂದರೆ ಇದೆ ಎಂದು ನನ್ನ ಗಮನಕ್ಕೆ ತಂದಿದ್ದಾರೋ ಅಲ್ಲೆಲ್ಲಾ ಸರಿ ಮಾಡಿದ್ದೇನೆ. ಇದುವರೆಗೆ ಯಾವ್ಯಾವ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು ತೊಂದರೆಯಾಗಿತ್ತೋ ಅದರ ಬಗ್ಗೆ ನಾನು ವಿಷಾದ ವ್ಯಕ್ತಪಡಿಸುತ್ತೇನೆ, ಮುಂದೆ ಈ ರೀತಿ ತೊಂದರೆಯಾಗುವುದಿಲ್ಲ. ಮತ್ತೊಮ್ಮೆ ನಾನು ಈ ಸಂದರ್ಭದಲ್ಲಿ ಹೇಳುವುದು ಇಷ್ಟೆ, ಇನ್ನು ಮುಂದೆ ಎಲ್ಲಾ ತಾಲ್ಲೂಕುಗಳಿಗೂ ಕೂಡ ಪಠ್ಯಪುಸ್ತಕಗಳನ್ನು ಪೂರೈಸುತ್ತೇನೆ. ಎಲ್ಲಾದರೂ ಒಂದೆರಡು ಕಡೆ ಪುಸ್ತಕಗಳು ಬರದೇ ಇದ್ದುದಕ್ಕೆ ಕಾರಣ ೧-೨-೩ನೇ ತರಗತಿಯಲ್ಲಿ ಸರಿಯಾಗಿ ಹಾಜರಾತಿ ಇಲ್ಲದೇ ಇದ್ದುದರಿಂದ. ಆ ತೊಂದರೆಗಳನ್ನೆಲ್ಲಾ ಈ ಸಾರಿ ಸರಿ ಮಾಡುತ್ತೇನೆ. ಅವರು ಸರಿಯಾಗಿ ಹಾಜರಾತಿ ಇಟ್ಟುಕೊಂಡಿದ್ದರೆ ಅವರಿಗೆ ಪುಸ್ತಕವೆಲ್ಲಾ ಸರಿಯಾಗಿ ಸೇರಿಸುತ್ತಿತ್ತು. ಇನ್ನು ಮುಂದೆ ಹಾಗಾಗುವುದಿಲ್ಲ. ಈಗಲೂ ಹೇಳುತ್ತೇನೆ. ಪ್ರತಿಯೊಬ್ಬ ಶಾಸಕರೂ ಕೂಡ ಅವರವರ ಕ್ಷೇತ್ರದಲ್ಲಿ ಈ ಪಠ್ಯಪುಸ್ತಕಗಳು ತೊಂದರೆ ಇವೆಯೋ ಅದನ್ನು ತಿಳಿಸಿದರೆ ಆ ಜಿಲ್ಲೆಗೆ ನಮ್ಮ ಅಧಿಕಾರಿಗಳನ್ನು ಕಳುಹಿಸಿ ಈ ಸಮಸ್ಯೆಯನ್ನು ಪರಿಹರಿಸುತ್ತೇನೆ.

೨-೦೦ ಪಿ.ಎಂ.

ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದ್ದರೆ ನಿಜವಾಗಿ ವಿಷಾದ ವ್ಯಕ್ತಪಡಿಸುವುದು ನನ್ನ ಕರ್ತವ್ಯ. ಮುಂದೆ ಈ ರೀತಿ ತೊಂದರೆಯಾಗದ ರೀತಿಯಲ್ಲಿ ಸರಿ ಮಾಡುತ್ತೇನೆ. ಮುಂದಿನ ವರ್ಷ ಈ ಪುಸ್ತಕಗಳ ವಿತರಣೆಗಾಗಿ ಈಗಾಗಲೇ ಮುದ್ರಣ ಮಾಡುತ್ತಿದ್ದೇವೆ, ಹಂಚುವುದಕ್ಕೆ ಮುಂಜಾಗರೂಕತೆ ಕ್ರಮ ತೆಗೆದುಕೊಂಡು ವಿಚಾರ ಮಾಡುತ್ತಾ ಇದ್ದೇವೆ. ಇದಕ್ಕೆ ಎಲ್ಲಾ ಸದಸ್ಯರ ಸಹಕಾರವನ್ನು ಈ ಸಂದರ್ಭದಲ್ಲಿ ಬೇಡುತ್ತಾ ಇದ್ದೇನೆ.

ಶ್ರೀ ಎಂ ಎಸ್. ಪಾಟೀಲ್.—ಒಂದು ಮುಖ್ಯವಾದ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದೆ. ಏಕೆಂದರೆ ಉರ್ದು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಪುಸ್ತಕಗಳಿಲ್ಲದೆ ತೊಂದರೆಯಾಗಿದೆ. ಬೇರೆ ಶಾಲೆಗಳಲ್ಲಿ ಈ ರೀತಿಯಾದರೆ ಅಡ್ಜಸ್ಟ್ ಮಾಡಬಹುದು. ಆದರೆ ಗಡಿ ಪ್ರದೇಶದಲ್ಲಿ ಆದಂಥ ಘಟನೆ ಇದೆ. ಈಗಾಗಲೇ ತಾವು ೪೮ ಪುಸ್ತಕಗಳು ಕೊರತೆ ಇದೆಯೆಂದು ಹೇಳಿದ್ದೀರಿ ಅಂತು, ಎಲ್ಲೆಲ್ಲಿ ಕೊರತೆ ಇದೆ ಅಲ್ಲಿಗೆ ಪುಸ್ತಕಗಳನ್ನು ಕಳುಹಿಸಿದೆ, ವಿದ್ಯಾರ್ಥಿಗಳಿಗೆ ತೊಂದರೆಯಾಗಿದ್ದಕ್ಕೆ ವಿಷಾದವನ್ನು ವ್ಯಕ್ತ ಪಡಿಸಿದಿರಿ. ಈಗ ನಾನು ಹೇಳುವುದೇನೆಂದರೆ, ವಿದ್ಯಾರ್ಥಿಗಳಿಗೆ ಏನು ತೊಂದರೆಯಾಗಿದೆ, ತೊಂದರೆ

ಯಾದದ್ದನ್ನು ಸರಿಪಡಿಸುವುದಕ್ಕಾಗುವುದಿಲ್ಲ. ಪರೀಕ್ಷೆಯಲ್ಲಿ ಉತ್ತರವನ್ನು ಬರೆಯಲಿಕ್ಕೆ ಅವಕಾಶ ಬೇಕಾಗುತ್ತದೆ ಪರೀಕ್ಷೆ ಇಲ್ಲ ಎಂದು ಹೇಳಬಹುದು, ಬುದ್ಧಿವಂತಿಕೆಯನ್ನು ತೋರಿಸಲಿಕ್ಕೆ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದಿರಿ. ಮಾನ್ಯ ಸ್ನೇಹಿತರು ಆ ಭಾಗದಿಂದ ಬಂದಿರುವವರು ಕೇಳುತ್ತಾ ಇದ್ದಾರೆ. ನಮ್ಮಲ್ಲೂ ಕೂಡ ಉರ್ದು ಶಾಲೆಗಳಲ್ಲಿ ಪುಸ್ತಕಗಳ ಕೊರತೆ ಇದೆ. ಆದುದರಿಂದ ಇಡೀ ಕರ್ನಾಟಕ ರಾಜ್ಯದಲ್ಲಿ ತೊಂದರೆಯಾಗದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ.

ಶ್ರೀ ಎಂ. ರಘಪತಿ.—ಮಾನ್ಯ ಅಧ್ಯಕ್ಷರೆ, ಅಲ್ಲಿ ೫೦ ಸಾವಿರ ಜನ ವಿದ್ಯಾರ್ಥಿಗಳಿಲ್ಲ. ಅವರಿಗೆ ಪುಸ್ತಕಗಳ ಕೊರತೆ ಇದೆ ಎಂದು ಹೇಳಿದ್ದಾರೆ. ಮತ್ತು ಈ ಸಂದರ್ಭದಲ್ಲಿ ಪರೀಕ್ಷೆಗಳ ವಿಷಯ ಹೇಳಿದ್ದಾರೆ. ಭಾರತ ದೇಶದಲ್ಲಿ ಎಸ್. ಎಸ್. ಎಲ್. ಸಿ. ವರೆಗೆ ಪರೀಕ್ಷಾ ಪದ್ಧತಿ ಇಲ್ಲ. ಈಗ ಪಬ್ಲಿಕ್ ಎಕ್ಸಾಮಿನೇಷನ್ಸ್ ಇಲ್ಲ, ಕ್ಲಾಸಿಕ್ಲಾಸ್ ಎಕ್ಸಾಮಿನೇಷನ್ಸ್ ಇದೆ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಈ ವಿದ್ಯಾರ್ಥಿಗಳನ್ನು ಪಾಸ್ ಮಾಡಿಬಿಡುತ್ತೀರಾ ?

ಶ್ರೀ ಎಂ. ರಘಪತಿ.—ಹೌದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಓದಬೇಕೋ ಬೇಡವೋ ?

ಶ್ರೀ ಎಂ. ರಘಪತಿ.—ಕೇಂದ್ರ ಸರ್ಕಾರ, ನಮ್ಮ ಸರ್ಕಾರ, ಮತ್ತು ನೀವು ಎಜುಕೇಷನ್ ಮಿನಿಸ್ಟರ್ ಆಗಿದ್ದಾಗಲೂ ಇದೇ ಪಾಲಿಸಿ, ಆ ಪಾಲಿಸಿಯನ್ನು ಏನೂ ಚೇಂಜ್ ಮಾಡಿಲ್ಲ. ರಾಜ್ಯದಲ್ಲಿ ೨೦ ಲಕ್ಷ ವಿದ್ಯಾರ್ಥಿಗಳು ಪುಸ್ತಕಗಳನ್ನು ಕೊಂಡುಕೊಳ್ಳುತ್ತಾ ಇರಲಿಲ್ಲ. ಈಗ ಮಾನ್ಯ ಸದಸ್ಯರು ಪುಸ್ತಕಗಳಿಲ್ಲದೆ ಈ ವಿದ್ಯಾರ್ಥಿಗಳು ಗೂಂಡಾ, ಬೂಟ್‌ಲೆಗ್ಗರ್ಸ ಆಗಬೇಕೋ ಎಂದು ಕೇಳಿದರು. ಆ ರೀತಿ ಆಗುತ್ತಾರೆ ಎಂತಲೇ ನಾವು ಈ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದುದು. ಎರಡು ಲಕ್ಷ ವಿದ್ಯಾರ್ಥಿಗಳ ಹಾಜರಾತಿ ಸಂಖ್ಯೆ ಜಾಸ್ತಿಯಾಗಿದೆ. ಏನಾದರೂ ಲೋಪವಿದ್ದರೆ ಇವತ್ತಿಗೂ ಅದನ್ನು ಸರಿ ಮಾಡುವುದಕ್ಕೆ ನಾನು ತಯಾರಿದ್ದೇನೆ. ಇವೊತ್ತೂ ನಾನು ಅಧಿಕಾರಿಗಳನ್ನು ಕಳಿಸಿಕೊಡುತ್ತೇನೆ. ಮಾನ್ಯ ಸದಸ್ಯರು ಯಾರು ಮಾಹಿತಿ ಕೊಟ್ಟಿದ್ದಾರೋ ಆ ಪ್ರತಿಯೊಂದು ಶಾಲೆಗೂ ಕಳುಹಿಸಿ ತಪಾಸಣೆ ಮಾಡಲಿಕ್ಕೆ ವಿಪ್ಪಾಟು ಮಾಡಿದ್ದೇನೆ. ಯಾವ ಶಾಲೆಯಲ್ಲಿ ಪುಸ್ತಕಗಳು ಬರಲಿಲ್ಲ ಅಂದರೆ ೩-೪ ದಿವಸದೊಳಗೆ ಅವನ್ನು ತಲುಪಿಸುವ ಕಾರ್ಯಕ್ರಮ ಮಾಡುತ್ತೇನೆ. ಪುಸ್ತಕಗಳಿಲ್ಲದೆ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗಕೂಡದು, ಅದಕ್ಕೇ ನಾನು ವಿಷಾದ ವ್ಯಕ್ತಪಡಿಸುತ್ತೇನೆ ಎಂದು ಆಗಲೇ ಹೇಳಿದ್ದುದು. ಈ ರಾಜ್ಯದಲ್ಲಿ ೨೦ ಲಕ್ಷ ವಿದ್ಯಾರ್ಥಿಗಳಂ ಪುಸ್ತಕಗಳನ್ನು ಕೊಂಡುಕೊಳ್ಳುತ್ತಾ ಇರಲಿಲ್ಲ, ಅವರಿಗೆ ಋಣವು ಆಗಬೇಕಂ ಎಂದು ಈ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದುದು. ಮಾನ್ಯ ಸದಸ್ಯರಿಗೆ ಪ್ರತಿಯೊಬ್ಬರಿಗೂ ನಾನು ಪತ್ರ ಬರೆದಿದ್ದೇನೆ. ಇದನ್ನು ಅಂಕಿಅಂಶಗಳೊಂದಿಗೆ ನಾನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ಹಿಂದಿನ ಯಾವ ಸರ್ಕಾರ ಪುಸ್ತಕಗಳನ್ನು ಈ ರೀತಿ ಕೊಟ್ಟಿತು ಎಂದು ಹೇಳುವುದಿಲ್ಲ. ನೂರಕ್ಕೆ ನೂರರಷ್ಟು ಸರಿ ಮಾಡುವುದಕ್ಕೆ ಕಷ್ಟವಾಗುತ್ತದೆ. ಸರಿ ಮಾಡಬೇಕಂ ಎಂಬ ಆಂಗ್ಸೈಟಿ ಇದೆ. ಸ್ವಲ್ಪ ಲೋಪದೋಷಗಳು ಆಗಿರಬಹುದು ಅದನ್ನು ಸರಿ ಮಾಡುತ್ತೇನೆಂದು ಹೇಳುತ್ತೇನೆ. ಎಲ್ಲಿ ಪುಸ್ತಕಗಳು ಸರಬರಾಜು ಆಗಲಿಲ್ಲ ಎಂದು ಬರೆದುಕೊಟ್ಟರೆ ನಾಳೆ, ನಾಡಿದ್ದೇ ಪುಸ್ತಕಗಳನ್ನು ತಲುಪಿಸುವ ಜವಾಬ್ದಾರಿ ನನ್ನದು.

ಶ್ರೀ ಎಸ್. ಬಂಗಾರಪ್ಪ.—ಮಕ್ಕಳು ಪರೀಕ್ಷೆಗೆ ಕುಳಿತುಕೊಳ್ಳದೆ ಪಾಸ್ ಮಾಡಿಕೊಳ್ಳುವ ವಿಚಾರ ಹೇಳಿದಿರಿ. ಅವರ ಜ್ಞಾನಾಭಿವೃದ್ಧಿಗೆ ಪುಸ್ತಕಗಳು ಅತೀ ಸಹಾಯಕ. ಆದರೆ ಪರೀಕ್ಷೆಗಳು ಹತ್ತಿರ ಬಂದರೂ ಪುಸ್ತಕಗಳಿಲ್ಲದೇ ಇರುವುದರಿಂದ ತೊಂದರೆಯಾಗುವುದು ಸಹಜ. ಮಕ್ಕಳು ಪರೀಕ್ಷೆ ಇಲ್ಲದೆ ಪಾಸ್ ಆಗತಕ್ಕಂಥಾದ್ದು ಇರಬಹುದು. ಆದರೆ ಪುಸ್ತಕಗಳು, ಅವರು ಪಾಸಾಗಲಿ, ಫೇಲಾಗಲಿ ಅವರ ಜ್ಞಾನಾಭಿವೃದ್ಧಿಗೆ ಅವಶ್ಯಕವಾಗತಕ್ಕಂಥಾದ್ದು. ಅದಕ್ಕೆ ಪುಸ್ತಕಗಳು ಸಹಾಯಕ. ಮಕ್ಕಳ ಜ್ಞಾನಾಭಿವೃದ್ಧಿಗೆ ಪುಸ್ತಕಗಳು ಅತೀ ಅವಶ್ಯಕ ಎಂದು ನಾವು ತಿಳಿದಿದ್ದೇವೆ. ಆದರೆ ಪುಸ್ತಕಗಳಿಲ್ಲದೆ ಜ್ಞಾನಾಭಿವೃದ್ಧಿಯಾಗುತ್ತದೆ ಎನ್ನತಕ್ಕಂಥ ನಂಬಿಕೆ ತಮಗಿದ್ದರೆ...

ಶ್ರೀ ಎಂ. ರಘುಪತಿ.—ನನಗೆ ಇಲ್ಲ. ಪುಸ್ತಕಗಳನ್ನು ೨೦ ಲಕ್ಷ ವಿದ್ಯಾರ್ಥಿಗಳು ಕೊಂಡುಕೊಳ್ಳುತ್ತಾ ಇರಲಿಲ್ಲ ಎಂದು ನಾನು ಪದೇ ಪದೇ ಹೇಳುತ್ತಾ ಇದ್ದೇನೆ. ಆದರೆ ಯಾರಿಗೆ ಪುಸ್ತಕಗಳ ಜ್ಞಾನ ಇರಲಿಲ್ಲ ಅಂತಹವರಿಗೂ ಜ್ಞಾನವನ್ನು ಕೊಡಬೇಕು ಎಂದು ಈ ಕಾರ್ಯಕ್ರಮವನ್ನು ನಾವು ಜಾರಿಗೆ ತಂದಿದ್ದೇವೆ. ಮಾನ್ಯ ಬಂಗಾರಪ್ಪನವರು ಹೇಳಿದಂತೆ ಜ್ಞಾನಾಭಿವೃದ್ಧಿಗೆ ಪುಸ್ತಕಗಳು ಬಹಳ ಅವಶ್ಯಕ. ಅದನ್ನು ಪೂರೈಸುತ್ತೇವೆ ಎಲ್ಲಾದರೂ ಲೋಪವಿದ್ದರೆ ಬರೆದು ಕಳಿಸಿ, ಎಲ್ಲಿ ಪುಸ್ತಕಗಳು ಇಲ್ಲ ಎಂದು ಹೇಳುತ್ತಾರೊ ಅಲ್ಲಿಗೆ ಪುಸ್ತಕಗಳನ್ನು ಪೂರೈಸುತ್ತೇವೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ತಮ್ಮ ಮುಖೇನ ಮಾನ್ಯ ಮಂತ್ರಿಗಳಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಒಂದನೇ ತರಗತಿಯಿಂದ ಎಸ್.ಎಸ್.ಎಲ್.ಸಿ.ವರೆಗೆ ಪರೀಕ್ಷೆ ಯಿಲ್ಲದೆ ಪಾಸಾಗುತ್ತಾರೆಂದು ಹೇಳುತ್ತಾರೆ. ಈ ವರ್ಷ ಏನಾ ತೊಂದರೆಯಾಗಿದೆ. ಆ ತೊಂದರೆ ಯನ್ನು ಬಗೆಹರಿಸಲಿಕ್ಕೆ ಎಲ್ಲಾ ಮಕ್ಕಳನ್ನು ಪಾಸ್ ಮಾಡಬೇಕೆಂದು ಎಲ್ಲಾ ಶಾಲೆಗಳಿಗೆ ಸರ್ಕ್ಯುಲರ್ ಕಳುಹಿಸಿಕೊಡಬೇಕು.

ಶ್ರೀ ಎಂ. ರಘುಪತಿ.—ಸರ್ಕ್ಯುಲರ್ ಅಲ್ಲ. ಅದು ಕೇಂದ್ರ ಸರ್ಕಾರದ ನೀತಿ. ಮಾನ್ಯ ಖಾರ್ಗೆಯವರು ಇದನ್ನು ತಿಳಿದುಕೊಂಡಿದ್ದಾರೆ. ಎಸ್.ಎಸ್.ಎಲ್.ಸಿ.ಯವರಿಗೆ ಮಾತ್ರ ಪಬ್ಲಿಕ್ ಎಕ್ಸಾಮಿನೇಷನ್ ನಡೆಯುತ್ತದೆ. ಒಂದರಿಂದ ೭ನೇ ತರಗತಿಯವರೆಗೆ ಕ್ಲಾಸ್ ಎಕ್ಸಾಮಿನೇಷನ್ ಇದೆ. ೧೫ನೇ ತರಗತಿಯವರೆಗೂ ಕಡ್ಡಾಯ ಶಿಕ್ಷಣ ಕೊಡಬೇಕೆಂದು ರಾಜ್ಯಾಂಗದಲ್ಲಿರುವ ಕಾರಣದಿಂದ ಪ್ರತಿ ಯೊಂದು ವಿದ್ಯಾರ್ಥಿಯನ್ನು ಮುಂದಿನ ತರಗತಿಗೆ ಪಾಸ್ ಮಾಡಿಕೊಂಡು ಹೋಗತಕ್ಕಂಥ ವ್ಯವಸ್ಥೆ ಈ ದೇಶದಲ್ಲಿ ನಡೆದಿದೆ. ಅದನ್ನು ಸಮರ್ಥನೆ ಮಾಡುವುದಕ್ಕೆ ನಾನು ನಿಂತಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ವಿದ್ಯಾಮಂತ್ರಿಗಳು...

ಶ್ರೀ ಎಂ. ರಘುಪತಿ.—ಯಾವುದು ರಾಂಗ್ ಸ್ಟೇಟ್‌ಮೆಂಟ್ ಎಂದು ವಿದ್ಯಾ ಇಲಾಖೆಯ ಮೇಲಿನ ಬೇಡಿಕೆ ಬಂದಾಗ ಕೂಲಂಕುಷವಾಗಿ ಚರ್ಚೆ ಮಾಡೋಣ, ಆಗ ಅದಕ್ಕೆ ಸಂಬಂಧಪಟ್ಟ ಮಾಹಿತಿ ಒದಗಿ ಸುತ್ತೇನೆ. ಪ್ರತಿಯೊಂದು ತರಗತಿಯಲ್ಲೂ ಕಡ್ಡಾಯವಾಗಿ ಪಬ್ಲಿಕ್ ಪರೀಕ್ಷೆ ನಡೆಯಬೇಕೆಂದು ಈ ಸದನದಲ್ಲಿ ತೀರ್ಮಾನವಾದರೆ, ಆ ತರಹವೇ ನಡೆಸೋಣ. ಈಗ ಇರೋ ನೀತಿಯನ್ನು ನಾನು ಹೇಳುತ್ತಿದ್ದೇನೆ. ಹೊಸದಾಗಿ ನೀತಿ ಮಾಡುವುದಕ್ಕಾಗುತ್ತದೆಯೇ ? ನೀವೆಲ್ಲಾ ಹೇಳಿದರೆ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ,—ಪುಸ್ತಕವಿಲ್ಲದೆ ಹುಡುಗರನ್ನು ಪರೀಕ್ಷೆಗೆ...

ಶ್ರೀ ಎಂ. ರಘುಪತಿ.—ಪುಸ್ತಕವಿಲ್ಲದೆ ಹುಡುಗರು ಪರೀಕ್ಷೆಯಲ್ಲಿ ಪಾಸ್ ಆಗಬೇಕೆಂದಲ್ಲ. ಎಲ್ಲೋ ಸ್ವಲ್ಪ ಲೋಪದೋಷವಾಗಿದೆ. ಬರೆದು ಕಳುಹಿಸಿ ಅದನ್ನು ಸರಿ ಮಾಡುತ್ತೇನೆಂದು ಹೇಳುತ್ತಿದ್ದೇನೆ.

(ii) ಮಾಜಿ ಕಾಂಗ್ರೆಸ್ ಅಧ್ಯಕ್ಷರ ಹೇಲೆ ಹಲ್ಲೆ ನಡೆಸಿದ ನಂದಕುಮಾರ್ ಅವರ ಬಂಧನದ ಬಗ್ಗೆ.

SRI MALLIKARJUNA M. KHAGE.—I call the attention of the Minister for Home to the murder of Nandakumar who had attempted to kill the Ex-President of Pradesh Congress (I).

ದಿನಾಂಕ ೨೮-೧-೧೯೮೬ ರಂದು ರಾತ್ರಿ ಸುಮಾರು ೧೦-೩೦ ಘಂಟೆ ಸಮಯದಲ್ಲಿ ಶ್ರೀ ವಿ.ಜಿ. ಸತ್ಯಾನಂದ ಎಂಬುವರು ಶ್ರೀರಾಮಪುರ ಪೊಲೀಸ್ ಠಾಣೆಗೆ ಹೋಗಿ, ಅವನ ಸಹೋದರ ವಿ.ಜಿ. ನಂದಕುಮಾರನು ಮನೆಯೊಳನ್ನು ಮಧ್ಯಾಹ್ನ ಸುಮಾರು ೧೨-೩೦ಘಂಟೆಯಲ್ಲಿ ಬಿಟ್ಟು ಹೋದವನು ವಾಪಸ್ಸು ಬಂದಿಲ್ಲವೆಂದು ಬಾಯಿ ಮಾತಿನಲ್ಲಿ ಹೇಳಿರುವನು. ಇದರ ಬಗ್ಗೆ ಆಪರಾಧ ಸಂಖ್ಯೆ ೪೬:೮೬ರ ಪ್ರಕಾರ ಮನುಷ್ಯ ನಾಪತ್ತೆ' ಎಂದು ಗುನ್ನೆಯೊಂದನ್ನು ನೋದಾಯಿಸಿದರು. ಸದರಿ ನಾಪತ್ತೆಯಾದ ವ್ಯಕ್ತಿಯ ವಿವರಗಳನ್ನು ಕಂಟ್ರೋಲ್ ರೂಮಿಗೆ ತಿಳಿಸಿ, ಕೂಡಲೇ ಅದನ್ನು ಎಲ್ಲಾ ಪೊಲೀಸ್ ಠಾಣೆಗಳಿಗೆ